**ಅಸಲು ದಾವ ಸಂಖ್ಯೆಃ 187/2019**

**ಪಿ.ಡಬ್ಲೂ -2**

**ದಿಃ 15-11-2025 ರಂದು ಸಾಕ್ಷಿ ಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ SHY ರವರಿಂದಃ-**

1. ನಾನು ಎಸ್ ಎಸ್ ಎಲ್ ಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಈ ದಿನ ನ್ಯಾಯಾಲಯಕ್ಕೆ ಸಾಕ್ಷ್ಯ ನುಡಿಯಲು ಬಂದಿರುತ್ತೇನೆ. ನನಗೆ ನ್ಯಾಯಾಲಯದಿಂದ ನೋಟಿಸ ಬಂದ ಕಾರಣ ನಾನು ನ್ಯಾಯಾಲಯಕ್ಕೆ ಬಂದಿರುತ್ತೇನೆ. ಈಗ ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ನೋಡುತ್ತಿದ್ದು ಅದನ್ನು ತಯಾರಿಸಲು ಯಾರು ಮಾಹಿತಿ ಕೊಟ್ಟರು ಎಂದು ನನಗೆ ಗೊತ್ತಿಲ್ಲ. ಸದರಿ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನಾನು ಸದರಿ ಮುಖ್ಯ ವಿಚಾರಣೆ ಪ್ರಮಾಣ ಪತ್ರಕ್ಕೆ ಸಹಿ ಮಾಡಿರುವುದಿಲ್ಲ. ಪ್ರಸ್ತುತ ದಾವೆಯಲ್ಲಿ ಯಾರು ಪಕ್ಷಗಾರರು ಇರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನಗೆ ದಾವೆಯಲ್ಲಿ ಯಾವ ರೀತಿ ಸಾಕ್ಷ್ಯ ನುಡಿಯಬೇಕೆಂದು ವಾದಿ ಹೇಳಿಕೊಟ್ಟಿರುವುದಿಲ್ಲ. ವಾದಿಯು ದಾವಾ ಸ್ವತ್ತುಗಳಲ್ಲಿ ತನಗೂ ಪಾಲು ಇರುತ್ತದೆ ಎಂದು ನನಗೆ ಕೇಳಿದರು ಹಾಗೂ ನಾನು ಆ ಸಮಯದಲ್ಲಿ ಅವರಿಗೂ ಪಾಲು ಇರುತ್ತದೆ ಎಂದು ಹೇಳಿರುತ್ತೇನೆ. ವಾದಿ ಮಜಗಾಂವ ನಲ್ಲಿ ವಾಸವಿರುತ್ತಾರೆ. ನಾನು ಮನ್ನೂರ ನಲ್ಲಿ ವಾಸವಿರುತ್ತೇನೆ. ಮನ್ನೂರ ಗ್ರಾಮದಲ್ಲಿ ವಾದಿಗೆ ಸೇರಿದ ಹೊಲ ಹಾಗೂ ಮನೆ ಇರುತ್ತದೆ. ವಾದಿಯೂ ಮನ್ನೂರು ಗ್ರಾಮದಲ್ಲಿ ಇರುವುದಿಲ್ಲ. ದಾವಾ ಸ್ವತ್ತುಗಳಲ್ಲಿ ವಾದಿ ವ್ಯವಸಾಯ ಮಾಡುವುದಿಲ್ಲ. ದಾವಾ ಸ್ವತ್ತುಗಳ ಕಬ್ಜೆಯಲ್ಲಿ ವಾದಿ ಇರುತ್ತಾರೆ. ನಾನು ದಾವಾ ಆಸ್ತಿಗಳ ಉತಾರ ನೋಡಿರುವುದಿಲ್ಲ. ಯಾವ ಆಧಾರದ ಮೇಲೆ ವಾದಿಯು ದಾವಾ ಆಸ್ತಿಗಳ ಕಬ್ಜೆಯಲ್ಲಿ ಇರುತ್ತಾರೆ ಎಂದು ಹೇಳುತ್ತಿದ್ದೇನೆ ಎಂದರೆ ಸಾಕ್ಷಿ ಮೊದಲಿನಿಂದಲೂ ವಾದಿಯ ತಾಯಿ ದಾವಾ ಸ್ವತುಗಳಿಗೆ ಬರುತ್ತಿದ್ದರು ಆ ಆಧಾರದ ಮೇಲೆ ಎಂದು ನುಡಿಯುತ್ತಾರೆ.

ಈ ದಾವೆಯ ದಾವಾ ಸ್ವತ್ತುಗಳ ವಿವರಗಳನ್ನು ನನಗೆ ಹೇಳಲು ಬರುವುದಿಲ್ಲ. ಈ ದಾವೆಗೂ ಮೊದಲು ವಾದಿಯ ಕುಟುಂಬಸ್ಥರಲ್ಲಿ ದಾವಾ ಸ್ವತ್ತುಗಳ ಕುರಿತು ಬೇರೆ ದಾವೆಗಳು ಇದ್ದವಾ ಎಂದರೆ ಸಾಕ್ಷಿ 1995 ರಲ್ಲಿ ಉತಾರಗಳಲ್ಲಿ ಹೆಸರುಗಳು ನಮೂದಾಗಿರುತ್ತವೆ ಎಂದು ನುಡಿಯುತ್ತಾರೆ.

4. ಚಂದ್ರಪ್ಪ ರವರ ತಂದೆ ಯಾರು ಎಂದು ನನಗೆ ಗೊತ್ತಿಲ್ಲ. ಶನ್ಮುಖ ರವರ ಸಹೋದರರ ನಡುವೆ ಯಾವ ರೀತಿ ಸ್ವತ್ತುಗಳಲ್ಲಿ ವಾಟ್ನಿ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಶನ್ಮುಖ ರವರ ಜೀವಿತಾವಧಿಯಲ್ಲಿ ಅವರ ಪಾಲಿಗೆ ಬಂದ ಆಸ್ತಿಯನ್ನು ಅವರು ಮಾರಾಟ ಮಾಡಿರುವ ಕುರಿತು ನನಗೆ ಮಾಹಿತಿ ಇರುವುದಿಲ್ಲ. ಚಂದ್ರಪ್ಪ ರವರು ಮಜಗಾಂವನಲ್ಲಿ ವಾಸವಿರುತ್ತಿದ್ದರು. ಚಂದ್ರಪ್ಪ ರವರು ಮನ್ನೂರ ಗ್ರಾಮಕ್ಕೆ ಹೋಗುವುದು ಬರುವುದು ಮಾಡುತ್ತಿರಲಿಲ್ಲ. ಚಂದ್ರಪ್ಪ ರವರು ನ್ಯಾಯಾಲಯಕ್ಕೆ ಬರುತ್ತಿರಲಿಲ್ಲ. ಚಂದ್ರಪ್ಪ ಮತ್ತು ಈ ದಾವೆಯ ಪ್ರತಿವಾದಿಯರ ನಡುವೆ ಯಾವ ರೀತಿ ದಾವಾ ಸ್ವತ್ತುಗಳ ಕುರಿತು ವಿಭಾಗ ಆಗಿತ್ತು ಎಂದರೆ ಸಾಕ್ಷಿ ಆ ರೀತಿ ಯಾವುದೇ ವಾಟ್ನಿ ಅಥವಾ ವಿಭಾಗ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ಮೊದಲೇ ವಾಟ್ನಿ ಆಗಿತ್ತು ಆದರೂ ಸಹ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ಪಕೀರಪ್ಪ,ಅಪ್ಪಣ್ಣ ಹಾಗೂ ಯಲ್ಲಪ್ಪ ರವರಿಗೆ ಹಕ್ಕು ಇರುತ್ತದೆ. ಸದರಿಯವರು ಮರಣಹೊಂದಿರುತ್ತಾರೆ. ಅವರ ಮಕ್ಕಳು ಬದುಕಿರುತ್ತಾರೆ. ಅವರೂ ಸಹ ವ್ಯವಸಾಯ ಮಾಡುತ್ತಾರೆ. ದಾವಾ ಆಸ್ತಿಗಳಲ್ಲಿ ವಾದಿ ಅಥವಾ ಚಂದ್ರಪ್ಪ ರವರಿಗೆ ಯಾವುದೇ ಹಕ್ಕು ಇರುವುದಿಲ್ಲ ಆದರೂ ಸಹ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮನ್ನೂರ ಗ್ರಾಮದಿಂದ ಈ ದಾವೆಯ ಸಲುವಾಗಿ ನಾನು

ನ್ಯಾಯಾಲಯಕ್ಕೆ ಇದೇ ಮೊದಲ ಬಾರಿಗೆ ಬಂದಿರುತ್ತೇನೆ. ನಾನು ನನ್ನ ದ್ವಿಚಕ್ರ ವಾಹನದಲ್ಲಿ ಬಂದಿರುತ್ತೇನೆ, ಅದರ ಖರ್ಚು ನನಗೆ ವಾದಿ ಕೊಟ್ಟಿರುವುದಿಲ್ಲ.

**ಮರುವಿಚಾರಣೆ ಇರುವುದಿಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**Sd/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**

**ಬೆಳಗಾವಿ.**